# ಬಿ.ಪ್ಯಾಕ್ ಮೂಲಕ ಬೆಂಗಳೂರು ನಾಗರಿಕರ ಸಮೀಕ್ಷೆ ವರದಿ

**ಪೀಠಿಕೆ**

ಬೆಂಗಳೂರು ರಾಜಕೀಯ ಕ್ರಿಯಾ ಸಮಿತಿಯು (ಬಿ.ಪ್ಯಾಕ್) 2022ರ ಫೆಬ್ರವರಿ ತಿಂಗಳಿನಿಂದ ಜೂನ್ ತಿಂಗಳವರೆಗೆ ಬೆಂಗಳೂರು ನಾಗರಿಕ ಗ್ರಹಿಕೆ ಸಮೀಕ್ಷೆ ನಡೆಸಿತು. ನಾಗರಿಕ ಸೇವೆಗಳಿಗೆ ಸಂಬಂಧಿಸಿದಂತೆ ವಾರ್ಡ್ ಮತ್ತು ಬೆಂಗಳೂರು ನಗರದಲ್ಲಿ ಒದಗಿಸಲಾಗುತ್ತಿರುವ ಸೇವೆಗಳ ವಿತರಣಾ ಗುಣಮಟ್ಟ ಹಾಗೂ ನಾಗರಿಕರ ಆದ್ಯತೆಗಳ ಬಗ್ಗೆ ಅವರ ಗ್ರಹಿಕೆಯನ್ನು ಅರ್ಥಮಾಡಿಕೊಳ್ಳಲು ಈ ಸಮೀಕ್ಷೆ ನಡೆಸಲಾಯಿತು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 8 ವಲಯಗಳಲ್ಲಿನ 198 ವಾರ್ಡ್‌ಗಳನ್ನು ಒಳಗೊಂಡಂತೆ 8405 ಪ್ರತಿಕ್ರಿಯೆಗಳನ್ನು ಈ ಸಮೀಕ್ಷೆಯ ಮೂಲಕ ದಾಖಲಿಸಲಾಗಿದೆ. ಬೆಂಗಳೂರು ರಾಜಕೀಯ ಕ್ರಿಯಾ ಸಮಿತಿ (ಬಿ.ಪ್ಯಾಕ್) ವಿನ್ಯಾಸಗೊಳಿಸಿದ ಪ್ರಶ್ನಾವಳಿಯ ಮೂಲಕ ಆನ್‌ಲೈನ್ ಫಾರ್ಮ್ ಬಳಸಿ ಪ್ರತಿಕ್ರಿಯೆಗಳನ್ನು ಸಂಗ್ರಹಿಸುವ ಮೂಲಕ ಸಮೀಕ್ಷೆಯನ್ನು ನಿರ್ವಹಿಸಲಾಯಿತು. ನಾಗರಿಕರಿಂದ ಪ್ರತಿಕ್ರಿಯೆಗಳನ್ನು ಸಂಗ್ರಹಿಸುವಲ್ಲಿ ಸ್ವಯಂಸೇವಕರ ಸೇವೆಯನ್ನು ಬಳಸಿಕೊಳ್ಳಲಾಯಿತು. ಆಯಾ ವಾರ್ಡುಗಳ ನಾಗರಿಕರು ಸಮೀಕ್ಷೆಗೆ ಪ್ರತಿಕ್ರಿಯಿಸಿದ್ದು, ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ಪ್ರಶ್ನಾವಳಿಗಳನ್ನು ನೀಡಿ, ಉತ್ತರಗಳನ್ನು ಪಡೆದುಕೊಳ್ಳಲಾಯಿತು.

ಆನ್‌ಲೈನ್ ಮೂಲಕ ವಿವಿಧ ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರ್ಮ್‌ಗಳು ಮತ್ತು ನಿವಾಸಿ ಗುಂಪುಗಳ ಮೂಲಕ ನಾಗರಿಕರು ಆನ್‌ಲೈನ್ ಲಿಂಕ್ ಸ್ವೀಕರಿಸಿದ್ದಾರೆ. ಆಫ್‌ಲೈನ್ ಸಮೀಕ್ಷೆಯನ್ನು ಸ್ವಯಂಸೇವಕರ ಮೂಲಕ ನಡೆಸಲಾಯಿತು. ಆಟೋ ಚಾಲಕರು, ಹಾಗೂ ವಿದ್ಯಾರ್ಥಿಗಳನ್ನು ಒಳಗೊಂಡ ಸ್ವಯಂಸೇವಕರು, ಪ್ರಶ್ನಾವಳಿಗಳನ್ನು ನೀಡಿ ನಾಗರಿಕರಿಂದ ಮಾಹಿತಿ ಸಂಗ್ರಹಿಸಿದರು. ಹಾಲು ವಿತರಣಾ ಸಿಬ್ಬಂದಿಗಳ ನೆರವನ್ನೂ ಪಡೆಯಲಾಯಿತು.


ಸಮೀಕ್ಷೆಯ ಪ್ರಶ್ನಾವಳಿಯು ನಾಗರಿಕರ ಮಾಹಿತಿ, ವಾರ್ಡ್ ಬಗ್ಗೆ ಅವರ ಅರಿವು, ಆಡಳಿತದ ಕಾರ್ಯವೈಖರಿ ಬಗ್ಗೆ ತೃಪ್ತಿ, ಸೇವಾ ವಿತರಣೆ ಮತ್ತು ಪಾಲಿಕೆ ಚುನಾವಣೆಗಳ ಬಗ್ಗೆ ಅಭಿಪ್ರಾಯಗಳನ್ನು ಒಳಗೊಂಡಿತ್ತು.

**ಸಮೀಕ್ಷೆ ಒಟ್ಟು 23 ಪ್ರಶ್ನೆಗಳೊಂದಿಗೆ ಕೆಳಗಿನ ವಿಭಾಗಗಳನ್ನುಹೊಂದಿತ್ತು:**

ಜನಸಂಖ್ಯಾ ವಿವರಗಳು ಮತ್ತು ಪ್ರತಿಕ್ರಿಯಿಸಿದವರ ವಿವರಗಳು
ವಿಭಾಗ 1: ನಾಗರಿಕ ಜಾಗೃತಿ ಮತ್ತು ಭಾಗವಹಿಸುವಿಕೆ (ಪಾಲಿಕೆ ವಾರ್ಡ್ ಸಂಬಂಧಿತ)
ವಿಭಾಗ 2: ಆಡಳಿತ ಮತ್ತು ನಾಗರಿಕ ಸೌಕರ್ಯಗಳ ತೃಪ್ತಿಯ ಮಟ್ಟ
ವಿಭಾಗ 3: ಪಾಲಿಕೆ ಚುನಾವಣೆ

ಬೆಂಗಳೂರು ನಗರದ 186 ವಾರ್ಡ್‌ಗಳಲ್ಲಿ 8405 ಪ್ರತಿಕ್ರಿಯೆಗಳೊಂದಿಗೆ ನಡೆಸಿದ ಸಮೀಕ್ಷೆಯನ್ನು ಬೆಂಗಳೂರು ನಗರ ಮಟ್ಟದಲ್ಲಿ ವಿಶ್ಲೇಷಿಸಲಾಗಿದೆ, ಸಮೀಕ್ಷೆಯ ವಲಯವಾರು ವಿಶ್ಲೇಷಣೆಯು ಪ್ರತಿ ವಲಯದಿಂದ ಪ್ರತಿಕ್ರಿಯಿಸಿದ ನಾಗರಿಕರನ್ನು ಒಳಗೊಂಡಿದೆ ಮತ್ತು ವಲಯ ಮಟ್ಟದಲ್ಲಿ ಪಡೆದ ನಾಗರಿಕರ ಪ್ರತಿಕ್ರಿಯೆಗಳನ್ನು ವಲಯ ಮಟ್ಟದಲ್ಲಿ ವಿಶ್ಲೇಷಿಸಲಾಗಿದೆ ಮತ್ತು ವಾರ್ಡ್ ಮಟ್ಟದಲ್ಲಿ ಪಡೆದ ನಾಗರಿಕರ ಪ್ರತಿಕ್ರಿಯೆಗಳನ್ನು ವಾರ್ಡ್ ಮಟ್ಟದಲ್ಲಿ ವಿಶ್ಲೇಷಿಸಲಾಗಿದೆ.

ಶೇ.50ಕ್ಕಿಂತ ಹೆಚ್ಚು 4 ಮತ್ತು 5ನ್ನು ರೇಟ್ ಮಾಡಿದ್ದಲ್ಲಿ ಹೆಚ್ಚು ತೃಪ್ತಿಕರವೆಂದು, ಶೇ.50ಕ್ಕಿಂತ ಹೆಚ್ಚು 1 ಮತ್ತು 2ನ್ನು ರೇಟ್ ಮಾಡಿದ್ದಲ್ಲಿ ಹೆಚ್ಚು ಅತೃಪ್ತಿಕರವೆಂದು ಪರಿಗಣಿಸಲಾಗಿದೆ.



# ಬೆಂಗಳೂರು ನಾಗರಿಕರ ಸಮೀಕ್ಷೆಯ ಪ್ರಮುಖ ಒಳನೋಟಗಳು:

## ವಿಭಾಗ 1: ನಾಗರಿಕ ಜಾಗೃತಿ ಮತ್ತು ಭಾಗವಹಿಸುವಿಕೆ

1. **2015-2020ರ ಅವಧಿಯಲ್ಲಿ ಪಾಲಿಕೆ ವಾರ್ಡ್ ಕಾರ್ಪೊರೇಟರ್ ಬಗ್ಗೆ ಅರಿವು**
   ಬೆಂಗಳೂರು ನಗರ ಮಟ್ಟದಲ್ಲಿ 2015-2020ರ ಅವಧಿಯಲ್ಲಿದ್ದ ಪಾಲಿಕೆ ವಾರ್ಡ್‌ನ ಕಾರ್ಪೊರೇಟರ್ ಬಗ್ಗೆ ಶೇ.85 ಮಂದಿಗೆ ಅರಿವಿದ್ದರೆ, ಶೇ. 15ರಷ್ಟು ಜನರು ತಮಗೆ ತಿಳಿದಿಲ್ಲ ಎಂದು ಹೇಳಿದ್ದಾರೆ.
2. **2015-2020ರ ಅವಧಿಯಲ್ಲಿ ಹಿಂದಿನ ಕಾರ್ಪೊರೇಟರ್ ಮಾಡಿದ ಕೆಲಸಗಳ ಬಗ್ಗೆ ತೃಪ್ತಿ**
   ಒಟ್ಟು ಪ್ರತಿಕ್ರಿಯಿಸಿದವರಲ್ಲಿ ಶೇ.35ರಷ್ಟು ಜನರು 2015-2020ರ ಅವಧಿಯಲ್ಲಿ ಮಾಜಿ ಕಾರ್ಪೊರೇಟರ್ ಮಾಡಿದ ಒಟ್ಟಾರೆ ಕೆಲಸದಿಂದ ತೃಪ್ತರಾಗಿರುವುದಾಗಿ ಅಭಿಪ್ರಾಯಪಟ್ಟಿದ್ದಾರೆ. ಆದರೆ, ಪ್ರತಿಕ್ರಿಯಿಸಿದ ಶೇ.23 ಮಂದಿ ಒಟ್ಟಾರೆಯಾಗಿ ಮಾಡಿದ ಕೆಲಸದ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದ್ದಾರೆ. ಶೇ.42 ಮಂದಿ ಕಾರ್ಪೊರೇಟರ್ ಮಾಡಿದ ಒಟ್ಟಾರೆ ಕೆಲಸದಿಂದ ಮಧ್ಯಮ ತೃಪ್ತಿ ಹೊಂದಿದ್ದಾರೆ

3. **ಮಾಜಿ ಕಾರ್ಪೊರೇಟರ್ ಸಮಸ್ಯೆಗಳನ್ನು ಪೂರ್ವಭಾವಿಯಾಗಿ ಗುರುತಿಸಿ ಪರಿಹರಿಸಿದ ನಿದರ್ಶನಗಳು**
   ಬೆಂಗಳೂರು ನಗರ ಮಟ್ಟ: ಸಮಸ್ಯೆಗಳನ್ನು ಪರಿಹರಿಸಲು ಕಾರ್ಪೊರೇಟರ್ ಪೂರ್ವಭಾವಿಯಾಗಿ ಸಹಾಯ ಮಾಡಿದ ಉದಾಹರಣೆಗಳಿವೆ ಎಂದು ಶೇ. 57 ರಷ್ಟು ಮಂದಿ ಹೇಳಿದ್ದಾರೆ. ಪ್ರತಿಕ್ರಿಯಿಸಿದ ಶೇ.42 ಮಂದಿ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಮಾಜಿ ಕಾರ್ಪೊರೇಟರ್ ಪೂರ್ವಭಾವಿಯಾಗಿ ಯಾವುದೇ ಉದಾಹರಣೆಗಳನ್ನು ಹೊಂದಿಲ್ಲ ಎಂದು ಹೇಳಿದ್ದಾರೆ.

4. **ವಾರ್ಡ್ ಸಮಿತಿ ಸಭೆಗಳು-ವಾರ್ಡ್ ಸಮಿತಿ ಸಭೆಗಳನ್ನು ನಿಯಮಿತವಾಗಿ ನಡೆಸಿದ ಬಗ್ಗೆ**
   ಬೆಂಗಳೂರು ನಗರ ಮಟ್ಟ: ಪ್ರತಿಕ್ರಿಯಿಸಿದ ಶೇ.18 ಮಂದಿ ವಾರ್ಡ್ ಸಮಿತಿ ಸಭೆಗಳು ನಿಯಮಿತವಾಗಿ ನಡೆಯುತ್ತಿರಲಿಲ್ಲ ಎಂದೂ, ಮತ್ತು ಶೇ.47 ಮಂದಿ ವಾರ್ಡ್ ಸಮಿತಿ ಸಭೆಗಳ ಬಗ್ಗೆ ತಮಗೆ ತಿಳಿದಿಲ್ಲ ಎಂದು ಹೇಳಿದ್ದಾರೆ. ಶೇ.30 ಉತ್ತರದಾರರು ವಾರ್ಡ್ ಸಮಿತಿ ಸಭೆಗಳು ನಿಯಮಿತವಾಗಿ ನಡೆಯುತ್ತವೆ ಎಂದು ಹೇಳಿದ್ದಾರೆ ಮತ್ತು ಶೇ.5ಕ್ಕಿಂತ

ಹೆಚ್ಚು ಮಂದಿ ವಾರ್ಡ್ ಸಮಿತಿ ಸಭೆಗಳು ಅನಿಯಮಿತ ರೀತಿಯಲ್ಲಿ ನಡೆಯುತ್ತಿದ್ದವು ಎಂದು ಹೇಳಿದ್ದಾರೆ.

### 5. ವಾರ್ಡ್ ಸಮಿತಿ ಸಭೆಗಳಿಗೆ ಹಾಜರಾದ ಬಗ್ಗೆ

ಬೆಂಗಳೂರು ನಗರ ಮಟ್ಟ: ಶೇ.63 ಮಂದಿ ತಮ್ಮ ವಾರ್ಡ್‌ಗಳಲ್ಲಿನ ವಾರ್ಡ್ ಸಮಿತಿ ಸಭೆಗಳಿಗೆ ಹಾಜರಾಗಿಲ್ಲ ಎಂದು ತಿಳಿಸಿದರೆ, ಶೇ.37% ಮಂದಿ ತಮ್ಮ ವಾರ್ಡ್‌ಗಳಲ್ಲಿನ ನಡೆದ ಸಭೆಗಳಿಗೆ ಹಾಜರಾಗಿದ್ದಾಗಿ ಹೇಳಿದ್ದಾರೆ.

### 6. ವಾರ್ಡ್ ಸಮಿತಿ ಸಭೆಗಳ ಪರಿಣಾಮ

ಬೆಂಗಳೂರು ನಗರ ಮಟ್ಟ: ಬೆಂಗಳೂರಿನಲ್ಲಿ ಪ್ರತಿಕ್ರಿಯಿಸಿದ ಶೇ.70 ಮಂದಿ ವಾರ್ಡ್ ಸಮಿತಿಗಳು ಪರಿಣಾಮಕಾರಿ ಎಂದು ಅಭಿಪ್ರಾಯಪಟ್ಟಿದ್ದಾರೆ, ಅದರಲ್ಲಿ ಶೇ.20 ಜನರು ಇದು ಹೆಚ್ಚು ಪರಿಣಾಮಕಾರಿ ಎಂದು ಅಭಿಪ್ರಾಯಪಟ್ಟಿದ್ದಾರೆ. ಶೇ.30ರಷ್ಟು ಮಂದಿ ವಾರ್ಡ್ ಸಮಿತಿಗಳು ಪರಿಣಾಮಕಾರಿಯಾಗಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ

## ವಿಭಾಗ 2: ಆಡಳಿತ ಮತ್ತು ನಾಗರಿಕ ಸೌಕರ್ಯಗಳ ತೃಪ್ತಿಯ ಮಟ್ಟ

### 7. ಬೆಂಗಳೂರು ನಗರದ ಒಟ್ಟಾರೆ ಆಡಳಿತ ವ್ಯವಸ್ಥೆ

ಬೆಂಗಳೂರಿನ 57% ಪ್ರತಿಕ್ರಿಯಿಸಿದ ಶೇ.57 ಮಂದಿ ನಗರದ ಒಟ್ಟಾರೆ ಆಡಳಿತ ವ್ಯವಸ್ಥೆ ತೃಪ್ತಿಕರವಾಗಿಲ್ಲ ಎಂದು ಹೇಳಿದ್ದಾರೆ ಅದರಲ್ಲಿ ಶೇ.39 ಮಂದಿ ಪರಿಸ್ಥಿತಿ ಮೊದಲಿಗಿಂತ ಉತ್ತಮವಾಗಿದೆ ಎಂದು ಹೇಳಿದ್ದಾರೆ. ಶೇ.28 ಮಂದಿ ಸ್ವಲ್ಪಮಟ್ಟಿಗೆ ತೃಪ್ತಿ ಹೊಂದಿರುವುದಾಗಿ ಪ್ರತಿಕ್ರಿಯಿಸಿದ್ದಾರೆ, ಶೇ.13 ಮಂದಿ ತೃಪ್ತಿ ವ್ಯಕ್ತಪಡಿಸಿದ್ದಾರೆ.

### 8. ತಮ್ಮ ವಾರ್ಡ್‌ನಲ್ಲಿ ಗಮನಿಸಬೇಕಾದ ಪ್ರಮುಖ 5 ಸಮಸ್ಯೆಗಳು

ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆ, ರಸ್ತೆಗಳು ಮತ್ತು ಹೊಂಡಗಳ ನಿರ್ವಹಣೆಗೆ ಆದ್ಯತೆ, ಕುಡಿಯುವ ನೀರು, ಕಸ ತೆಗೆಯುವಿಕೆ ಮತ್ತು ಘನತ್ಯಾಜ್ಯ ನಿರ್ವಹಣೆ, ತ್ಯಾಜ್ಯ ನೀರು ನಿರ್ವಹಣೆ ಎರಡನೆಯ ಆದ್ಯತೆಯಾಗಿದೆ. ಕುಡಿಯುವ ನೀರಿನ ನಂತರ ಮೂರನೇ ಅತ್ಯಂತ ಆದ್ಯತೆಯ ವಿಷಯ ಸಾರ್ವಜನಿಕ ಶೌಚಾಲಯ ವ್ಯವಸ್ಥೆಯಾಗಿದೆ.

### 9. ಬೆಂಗಳೂರಿನಲ್ಲಿ ಸೇವೆಗಳ ತೃಪ್ತಿ ಮಟ್ಟ

ಕೆರೆಗಳ ಅಭಿವೃದ್ಧಿ ಮತ್ತು ಪುನರುಜ್ಜೀವನವು ಅತ್ಯಂತ ತೃಪ್ತಿಕರವಾಗಿದೆ ಮತ್ತು ರಸ್ತೆಗಳು ಮತ್ತು ಚಲನಶೀಲತೆ ಬೆಂಗಳೂರಿನಲ್ಲಿ ಅತ್ಯಂತ ಅತೃಪ್ತಿಕರ ಸೇವೆಗಳಾಗಿವೆ.

## 10. ವಾರ್ಡ್‌ಗಳಲ್ಲಿನ ಸಮಗ್ರ ಅಭಿವೃದ್ಧಿಯ ಚಲನಶೀಲತೆ ತೃಪ್ತಿ ಮಟ್ಟ

(1 ರಿಂದ 5ರ ಪ್ರಮಾಣ, 5 ಅತ್ಯಧಿಕ ಮತ್ತು 1 ಕಡಿಮೆ)
ಬೆಂಗಳೂರು ನಗರ ಮಟ್ಟ: ಪ್ರತಿಕ್ರಿಯಿಸಿದ ಶೇ.39% ಮಂದಿ ತಮ್ಮ ವಾರ್ಡ್‌ನಲ್ಲಿನ ಚಲನಶೀಲತೆಯ ಪರಿಸ್ಥಿತಿಗಳ ತೃಪ್ತಿ ಮಟ್ಟದಲ್ಲಿ ತಟಸ್ಥರಾಗಿದ್ದಾರೆ, ಶೇ.34 ಮಂದಿ ತೃಪ್ತಿ ವ್ಯಕ್ತಪಡಿಸಿದ್ದಾರೆ ಮತ್ತು ಶೇ.27% ಮಂದಿ ಅತೃಪ್ತರಾಗಿದ್ದಾರೆ.
ವಲಯ ಮಟ್ಟ: ಮೊಬಿಲಿಟಿ ಪರಿಸ್ಥಿತಿಗಳ ಬಗ್ಗೆ ತೃಪ್ತಿ ಮಟ್ಟದಲ್ಲಿ, ರಾಜರಾಜೇಶ್ವರಿ ನಗರ ವಲಯದಲ್ಲಿ ಪ್ರತಿಕ್ರಿಯಿಸಿದ ಶೇ.60 (434/728) ಮಂದಿ ಹೆಚ್ಚು ತೃಪ್ತಿ ಹೊಂದಿದ್ದಾರೆ ಮತ್ತು ಮಹದೇವಪುರ ವಾರ್ಡಿನಲ್ಲಿ ಪ್ರತಿಕ್ರಿಯಿಸಿದವರಲ್ಲಿ ಶೇ.63 (473/746) ಮಂದಿ ಅತೃಪ್ತರಾಗಿದ್ದಾರೆ.
ವಾರ್ಡ್ ಮಟ್ಟ: ರಾಜರಾಜೇಶ್ವರಿನಗರ ವಲಯದ 10 ವಾರ್ಡ್‌ಗಳ ಪೈಕಿ 8ರಲ್ಲಿ ಶೇ.50ಕ್ಕಿಂತ ಹೆಚ್ಚು ಪ್ರತಿಕ್ರಿಯಿಸಿದವರು ತಮ್ಮ ವಾರ್ಡ್‌ನ ಚಲನಶೀಲತೆಯ ಸ್ಥಿತಿಯಿಂದ ಹೆಚ್ಚು ತೃಪ್ತರಾಗಿದ್ದರೆ, ಮಹದೇವಪುರ ವಲಯದ 17 ವಾರ್ಡ್‌ಗಳ ಪೈಕಿ 9 ವಾರ್ಡ್‌ಗಳಲ್ಲಿ ಶೇ. 50ಕ್ಕಿಂತ ಹೆಚ್ಚು ಮಂದಿ ಹೆಚ್ಚು ಅತೃಪ್ತರಾಗಿದ್ದಾರೆ.

## 11. ವಾರ್ಡ್‌ನಲ್ಲಿನ ರಸ್ತೆಗಳ ಸ್ಥಿತಿ ಬಗ್ಗೆ ತೃಪ್ತಿ ಮಟ್ಟ

(1ರಿಂದ 5 ರ ಪ್ರಮಾಣ, 5 ಅತ್ಯಧಿಕ ಮತ್ತು 1 ಕಡಿಮೆ)
ಬೆಂಗಳೂರು ನಗರ ಮಟ್ಟ: ಪ್ರತಿಕ್ರಿಯಿಸಿದ ಶೇ. 39 ಮಂದಿ ತಮ್ಮ ವಾರ್ಡ್‌ನಲ್ಲಿನ ರಸ್ತೆ ಪರಿಸ್ಥಿತಿಗಳ ತೃಪ್ತಿಯ ಮಟ್ಟದಲ್ಲಿ ತಟಸ್ಥರಾಗಿದ್ದಾರೆ, ಪ್ರತಿಕ್ರಿಯಿಸಿದ ಶೇ.30ರಷ್ಟು ಮಂದಿ ತೃಪ್ತಿ ಹೊಂದಿದ್ದಾರೆ ಮತ್ತು ಶೇ. 31 ಮಂದಿ ಅತೃಪ್ತರಾಗಿದ್ದಾರೆ.
ವಲಯ ಮಟ್ಟ: ತಮ್ಮ ವಾರ್ಡ್‌ನ ರಸ್ತೆ ಪರಿಸ್ಥಿತಿಗಳ ಬಗ್ಗೆ ತೃಪ್ತಿಯ ಮಟ್ಟದಲ್ಲಿ, ರಾಜರಾಜೇಶ್ವರಿ ನಗರ ವಲಯದಲ್ಲಿ ಪ್ರತಿಕ್ರಿಯಿಸಿದ ಶೇ.55 ಮಂದಿ ಹೆಚ್ಚು ಅತೃಪ್ತರಾಗಿದ್ದಾರೆ.
ವಾರ್ಡ್ ಮಟ್ಟ: ರಾಜರಾಜೇಶ್ವರಿನಗರ ವಲಯದ 10 ವಾರ್ಡ್‌ಗಳ ಪೈಕಿ 9 ವಾರ್ಡ್‌ಗಳಲ್ಲಿ ಶೇ.50ಕ್ಕಿಂತ ಹೆಚ್ಚು ಜನರು ತಮ್ಮ ವಾರ್ಡ್‌ನ ರಸ್ತೆಯ ಸ್ಥಿತಿಯ ಬಗ್ಗೆ ಹೆಚ್ಚು ತೃಪ್ತರಾಗಿದ್ದರೆ, ಮಹದೇವಪುರ ವಲಯದಲ್ಲಿ 17 ವಾರ್ಡ್‌ಗಳ ಪೈಕಿ 10ರಲ್ಲಿ ಶೇ.50ಕ್ಕಿಂತ ಹೆಚ್ಚು ಮಂದಿ ರಸ್ತೆ ಪರಿಸ್ಥಿತಿಯ ಬಗ್ಗೆ ಅತೃಪ್ತರಾಗಿದ್ದಾರೆ.

## 12. ವಾರ್ಡ್‌ನಲ್ಲಿನ ರಸ್ತೆದೀಪ ಮತ್ತು ಸುರಕ್ಷತೆ ಸ್ಥಿತಿ ಬಗ್ಗೆ ತೃಪ್ತಿ ಮಟ್ಟ

(1ರಿಂದ 5 ರ ಪ್ರಮಾಣ, 5 ಅತ್ಯಧಿಕ ಮತ್ತು 1 ಕಡಿಮೆ)
ಬೆಂಗಳೂರು ನಗರ ಮಟ್ಟ: ಪ್ರತಿಕ್ರಿಯಿಸಿದ ಶೇ. 39 ಮಂದಿ ತಮ್ಮ ವಾರ್ಡ್‌ನಲ್ಲಿನ ರಸ್ತೆ ಪರಿಸ್ಥಿತಿಗಳ ತೃಪ್ತಿಯ ಮಟ್ಟದಲ್ಲಿ

ತಟಸ್ಥರಾಗಿದ್ದಾರೆ, ಪ್ರತಿಕ್ರಿಯಿಸಿದ ಶೇ.30ರಷ್ಟು ಮಂದಿ ತೃಪ್ತಿ ಹೊಂದಿದ್ದಾರೆ ಮತ್ತು ಶೇ. 31 ಮಂದಿ ಅತೃಪ್ತರಾಗಿದ್ದಾರೆ.

ವಲಯ ಮಟ್ಟ: ತಮ್ಮ ವಾರ್ಡ್‌ನ ರಸ್ತೆದೀಪ ಮತ್ತು ಸುರಕ್ಷತೆ ಪರಿಸ್ಥಿತಿಗಳ ಬಗ್ಗೆ ತೃಪ್ತಿಯ ಮಟ್ಟದಲ್ಲಿ, ರಾಜರಾಜೇಶ್ವರಿ ನಗರ ವಲಯದಲ್ಲಿ ಪ್ರತಿಕ್ರಿಯಿಸಿದ ಶೇ.60 (728ರಲ್ಲಿ 434) ಮಂದಿ ಹೆಚ್ಚು ತೃಪ್ತರಾಗಿದ್ದಾರೆ ಮತ್ತು ಮಹದೇವಪುರ ವಾರ್ಡಿನಲ್ಲಿ ಪ್ರತಿಕ್ರಿಯಿಸಿದ ಶೇ.46.51 (212/746) ಮಂದಿ ಅತೃಪ್ತರಾಗಿದ್ದಾರೆ.

ವಾರ್ಡ್ ಮಟ್ಟ: ಬೊಮ್ಮನಹಳ್ಳಿ ವಲಯದ 16 ವಾರ್ಡ್‌ಗಳ ಪೈಕಿ 11 ವಾರ್ಡ್‌ಗಳಲ್ಲಿ ಶೇ.50ಕ್ಕಿಂತ ಹೆಚ್ಚು ಜನರು ತಮ್ಮ ವಾರ್ಡ್‌ನ ಬೆಳಕು ಮತ್ತು ಇತರ ಸುರಕ್ಷತೆಯ ಬಗ್ಗೆ ಹೆಚ್ಚು ತೃಪ್ತಿ ಹೊಂದಿದ್ದಾರೆ, ಆದರೆ ಮಹದೇವಪುರ ವಲಯದ 17 ವಾರ್ಡುಗಳ ಪೈಕಿ 3ರಲ್ಲಿ ಶೇ.50ಕ್ಕಿಂತ ಹೆಚ್ಚು ಪ್ರತಿಕ್ರಿಯಿಸಿದವರು ಅವರ ವಾರ್ಡ್‌ನ ಬೆಳಕು ಮತ್ತು ಇತರ ಸುರಕ್ಷತಾ ಸ್ಥಿತಿ ಬಗ್ಗೆ ಹೆಚ್ಚು ಅತೃಪ್ತರಾಗಿದ್ದಾರೆ.

### 13. ವಾರ್ಡಿನಲ್ಲಿ ಕಸ ತೆಗೆಯುವಿಕೆ ಮತ್ತು ತ್ಯಾಜ್ಯ ನಿರ್ವಹಣೆ ಬಗ್ಗೆ ತೃಪ್ತಿ ಮಟ್ಟ

ಬೆಂಗಳೂರು ನಗರ ಮಟ್ಟ: ಶೇ 39 ಮಂದಿ ವರು ತಮ್ಮ ವಾರ್ಡ್‌ನಲ್ಲಿ ಕಸ ತೆಗೆಯುವಿಕೆ ಮತ್ತು ತ್ಯಾಜ್ಯ ನಿರ್ವಹಣೆಯಲ್ಲಿ ಪಾಲಿಕೆ ಮಾಡಿದ ಕೆಲಸದ ತೃಪ್ತಿಯ ಮಟ್ಟದಲ್ಲಿ ತಟಸ್ಥರಾಗಿದ್ದಾರೆ, ಪ್ರತಿಕ್ರಿಯಿಸಿದ ಶೇ.30 ರಷ್ಟು ಜನ ತೃಪ್ತಿ ಹೊಂದಿದ್ದಾರೆ ಮತ್ತು ಶೇ.31 ಮಂದಿ ಅತೃಪ್ತರಾಗಿದ್ದಾರೆ.

ವಲಯ ಮಟ್ಟ: ರಾಜರಾಜೇಶ್ವರಿ ನಗರ ವಲಯದಲ್ಲಿ ಪ್ರತಿಕ್ರಿಯಿಸಿದ ಶೇ.57 (414/728) ಮಂದಿ ಹೆಚ್ಚು ತೃಪ್ತಿ ಹೊಂದಿದ್ದಾರೆ ಮತ್ತು ಪ್ರತಿಕ್ರಿಯಿಸಿದ ಶೇ.45 (81/181) ಯಲಹಂಕದವರು ಹೆಚ್ಚು ಅತೃಪ್ತರಾಗಿದ್ದಾರೆ.

ವಾರ್ಡ್ ಮಟ್ಟ: ಬೊಮ್ಮನಹಳ್ಳಿ ವಲಯದ 16 ವಾರ್ಡ್‌ಗಳ ಪೈಕಿ 13 ವಾರ್ಡ್‌ಗಳಲ್ಲಿ ಪ್ರತಿಕ್ರಿಯಿಸಿದ ಶೇ.50ಕ್ಕಿಂತ ಹೆಚ್ಚು ಮಂದಿ ಕಸ ತೆಗೆಯುವಿಕೆ ಮತ್ತು ತ್ಯಾಜ್ಯ ನಿರ್ವಹಣೆ ಸಂಬಂಧ ಪಾಲಿಕೆ ಮಾಡಿದ ಕೆಲಸದಿಂದ ಹೆಚ್ಚು ತೃಪ್ತರಾಗಿದ್ದರೆ, ರಾಜರಾಜೇಶ್ವರಿನಗರ ವಲಯದ 14 ವಾರ್ಡುಗಳ ಪೈಕಿ 2ರಲ್ಲಿ ಪ್ರತಿಕ್ರಿಯಿಸಿದ ಶೇ.50ಕ್ಕಿಂತ ಹೆಚ್ಚು ಮಂದಿ ಕಸ ತೆಗೆಯುವಿಕೆ ಮತ್ತು ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಪಾಲಿಕೆ ಮಾಡಿದ ಕೆಲಸದ ಬಗ್ಗೆ ಹೆಚ್ಚು ಅತೃಪ್ತಿ ವ್ಯಕ್ತಪಡಿಸಿದ್ದಾರೆ.

### 14. ವಾರ್ಡ್‌ಗಳಲ್ಲಿನ ಉದ್ಯಾನವನಗಳು ಮತ್ತು ಆಟದ ಮೈದಾನಗಳ ಅಭಿವೃದ್ಧಿ ತೃಪ್ತಿ ಮಟ್ಟ

(1 ರಿಂದ 5ರ ಪ್ರಮಾಣ, 5 ಅತ್ಯಧಿಕ ಮತ್ತು 1 ಕಡಿಮೆ)

ಬೆಂಗಳೂರು ನಗರ ಮಟ್ಟ: ಪ್ರತಿಕ್ರಿಯಿಸಿದವರಲ್ಲಿ ಶೇ.40ರಷ್ಟು ಜನರು ತಮ್ಮ ವಾರ್ಡ್‌ನಲ್ಲಿರುವ ಉದ್ಯಾನವನಗಳು ಮತ್ತು ಆಟದ ಮೈದಾನಗಳ

ಅಭಿವೃದ್ಧಿ ಮತ್ತು ನಿರ್ವಹಣೆಯಲ್ಲಿ ಪಾಲಿಕೆ ಮಾಡಿದ ಕೆಲಸದ ಬಗ್ಗೆ ತೃಪ್ತಿಯ ಮಟ್ಟದಲ್ಲಿ ತಟಸ್ಥರಾಗಿದ್ದಾರೆ, ಪ್ರತಿಕ್ರಿಯಿಸಿದವರಲ್ಲಿ ಶೇ.37ರಷ್ಟು ಮಂದಿ ತೃಪ್ತಿ ಮತ್ತು ಶೇ.23ರಷ್ಟು ಮಂದಿ ಅತೃಪ್ತರಾಗಿದ್ದಾರೆ.

ವಲಯ ಮಟ್ಟ: ರಾಜರಾಜೇಶ್ವರಿ ನಗರ ವಲಯದಲ್ಲಿ ಪ್ರತಿಕ್ರಿಯಿಸಿದ ಶೇ.62ರಷ್ಟು ಮಂದಿ (452/728) ಹೆಚ್ಚು ತೃಪ್ತಿ ಹೊಂದಿದ್ದಾರೆ ಮತ್ತು ಪ್ರತಿಕ್ರಿಯಿಸಿದ ಮಹದೇವಪುರದ ಶೇ.56ರಷ್ಟು ಮಂದಿ (417/746) ಅತೃಪ್ತರಾಗಿದ್ದಾರೆ.

ವಾರ್ಡ್ ಮಟ್ಟ: ಬೊಮ್ಮನಹಳ್ಳಿ ವಲಯದ 16 ವಾರ್ಡ್‌ಗಳ ಪೈಕಿ 13 ವಾರ್ಡ್‌ಗಳಲ್ಲಿ ಶೇ. 50% ಕ್ಕಿಂತ ಹೆಚ್ಚು ಜನರು ಉದ್ಯಾನವನಗಳು ಮತ್ತು ಆಟದ ಮೈದಾನಗಳ ಅಭಿವೃದ್ಧಿ ಮತ್ತು ನಿರ್ವಹಣೆಯಲ್ಲಿ ಪಾಲಿಕೆ ಮಾಡಿದ ಕೆಲಸದಿಂದ ಹೆಚ್ಚು ತೃಪ್ತಿ ಹೊಂದಿದ್ದು, ಮಹದೇವಪುರ ವಲಯದ 17 ವಾರ್ಡುಗಳ ಪೈಕಿ 3ರಲ್ಲಿ 50% ಕ್ಕಿಂತ ಹೆಚ್ಚು ಪ್ರತಿಕ್ರಿಯಿಸಿದ್ದು, ಉದ್ಯಾನವನಗಳು ಮತ್ತು ಆಟದ ಮೈದಾನಗಳ ಅಭಿವೃದ್ಧಿ ಮತ್ತು ನಿರ್ವಹಣೆಯಲ್ಲಿ ಪಾಲಿಕೆ ಮಾಡಿದ ಕೆಲಸಗಳ ಬಗ್ಗೆ ಹೆಚ್ಚು ಅತೃಪ್ತರಾಗಿದ್ದಾರೆ.

## 15. ವಾರ್ಡ್‌ನಲ್ಲಿ ಕೆರೆ ಅಭಿವೃದ್ಧಿ ಮತ್ತು ಪುನುರುಜ್ಜೀವ ಕೆಲಸದ ಬಗ್ಗೆ ತೃಪ್ತಿ ಮಟ್ಟ

(1ರಿಂದ 5 ರ ಪ್ರಮಾಣ, 5 ಅತ್ಯಧಿಕ ಮತ್ತು 1 ಕಡಿಮೆ)

ಬೆಂಗಳೂರು ನಗರ ಮಟ್ಟ: ಬೆಂಗಳೂರಿನ ಶೇ.46ರಷ್ಟು ಮಂದಿ ತಮ್ಮ ವಾರ್ಡ್‌ನಲ್ಲಿ ಕೆರೆ ಅಭಿವೃದ್ಧಿ ಮತ್ತು ಪುನರುಜ್ಜೀವ ಕೆಲಸದಿಂದ ತೃಪ್ತರಾಗಿದ್ದಾರೆ, ಪ್ರತಿಕ್ರಿಯಿಸಿದವರಲ್ಲಿ ಶೇ.26ರಷ್ಟು ಮಂದಿ ತಟಸ್ಥರು ಮತ್ತು ಶೇ.28ರಷ್ಟು ಮಂದಿ ಅತೃಪ್ತಿ ಹೊಂದಿದ್ದಾರೆ.

ವಲಯ ಮಟ್ಟ: ರಾಜರಾಜೇಶ್ವರಿನಗರ ವಲಯದ ಶೇ.57ರಷ್ಟು (414/728) ಮಂದಿ ಪ್ರತಿಕ್ರಿಯಿಸಿದ್ದು, ಹೆಚ್ಚು ತೃಪ್ತಿ ವ್ಯಕ್ತಪಡಿಸಿದ್ದಾರೆ ಮತ್ತು ಮಹದೇವಪುರದ ಶೇ.47ರಷ್ಟು ಮಂದಿ (354/746) ಪ್ರತಿಕ್ರಿಯಿಸಿದ್ದು ಹೆಚ್ಚು ಅತೃಪ್ತಿ ವ್ಯಕ್ತಪಡಿಸಿದ್ದಾರೆ ಪ್ರತಿಕ್ರಿಯಿಸಿದವರಲ್ಲಿ ಶೇ.26 ಮಂದಿ ತಟಸ್ಥರಾಗಿದ್ದಾರೆ ಮತ್ತು ಶೇ. 28 ಮಂದಿ ಅತೃಪ್ತರಾಗಿದ್ದಾರೆ

- **ವಾರ್ಡ್‌ನಲ್ಲಿ ಸೇವೆಗಳ ತೃಪ್ತಿ ಮಟ್ಟ**

| Services<br>ಸೇವೆಗಳು | City Level<br>ಬೆಂಗಳೂರು ನಗರ ಮಟ್ಟ | Zonal Level<br>ವಲಯ ಮಟ್ಟ | Zonal Level<br>ವಾರ್ಡ್ ಮಟ್ಟ |
|---|---|---|---|

| | | | |
|---|---|---|---|
| **ಚಲನಶೀಲತೆಯ ಪರಿಸ್ಥಿತಿಗಳ ತೃಪ್ತಿ** | • ಪ್ರತಿಕ್ರಿಯಿಸಿದ ಶೇ.34 ಮಂದಿ ತಮ್ಮ ವಾರ್ಡ್‌ನಲ್ಲಿನ ಚಲನಶೀಲತೆಯ ಪರಿಸ್ಥಿತಿಗಳ ಕುರಿತು ತೃಪ್ತಿ ವ್ಯಕ್ತಪಡಿಸಿದ್ದಾರೆ<br>• ಶೇ.39% ಮಂದಿ ತಮ್ಮ ವಾರ್ಡ್‌ನಲ್ಲಿನ ಚಲನಶೀಲತೆಯ ಪರಿಸ್ಥಿತಿಗಳ ತೃಪ್ತಿ ಮಟ್ಟದಲ್ಲಿ ತಟಸ್ಥರಾಗಿದ್ದಾರೆ<br>• ಶೇ.27% ಮಂದಿ ಅತೃಪ್ತರಾಗಿದ್ದಾರೆ | • ಮಹದೇವಪುರ ವಲಯದ ವಾರ್ಡಿನಲ್ಲಿ ಮೊಬಿಲಿಟಿ ಪರಿಸ್ಥಿತಿಗಳ ಬಗ್ಗೆ ಪ್ರತಿಕ್ರಿಯಿಸಿದವರಲ್ಲಿ ಶೇ.63 (473/746) ಮಂದಿ ಅತೃಪ್ತರಾಗಿದ್ದಾರೆ<br>• ರಾಜರಾಜೇಶ್ವರಿ ನಗರ ವಲಯದಲ್ಲಿ ಪ್ರತಿಕ್ರಿಯಿಸಿದ ಶೇ.60 (434/728) ಮಂದಿ ಹೆಚ್ಚು ತೃಪ್ತಿ ಹೊಂದಿದ್ದಾರೆ | • ರಾಜರಾಜೇಶ್ವರಿನಗರ ವಲಯದ 10 ವಾರ್ಡ್‌ಗಳ ಪೈಕಿ 8ರಲ್ಲಿ ಶೇ.50ಕ್ಕಿಂತ ಹೆಚ್ಚು ಪ್ರತಿಕ್ರಿಯಿಸಿದವರು ತಮ್ಮ ವಾರ್ಡ್‌ನ ಚಲನಶೀಲತೆಯ ಸ್ಥಿತಿಯಿಂದ ಹೆಚ್ಚು ತೃಪ್ತರಾಗಿದ್ದರೆ<br>• ಮಹದೇವಪುರ ವಲಯದ 17 ವಾರ್ಡ್‌ಗಳ ಪೈಕಿ 9 ವಾರ್ಡ್‌ಗಳಲ್ಲಿ ಶೇ. 50ಕ್ಕಿಂತ ಹೆಚ್ಚು ಮಂದಿ ಹೆಚ್ಚು ಅತೃಪ್ತರಾಗಿದ್ದಾರೆ. |
| **ರಸ್ತೆಗಳ ಸ್ಥಿತಿ ಬಗ್ಗೆ** | • ಪ್ರತಿಕ್ರಿಯಿಸಿದ ಶೇ. 31 ಮಂದಿ ತಮ್ಮ ವಾರ್ಡ್‌ನಲ್ಲಿನ ರಸ್ತೆ ಪರಿಸ್ಥಿತಿಗಳ ತೃಪ್ತಿಯ ಮಟ್ಟದಲ್ಲಿ ಅತೃಪ್ತರಾಗಿದ್ದಾರೆ<br>• ಶೇ. 39 ಮಂದಿ ತಮ್ಮ ವಾರ್ಡ್‌ನಲ್ಲಿನ ರಸ್ತೆ ಪರಿಸ್ಥಿತಿಗಳ ತೃಪ್ತಿಯ ಮಟ್ಟದಲ್ಲಿ ತಟಸ್ಥರಾಗಿದ್ದಾರೆ<br>• ಪ್ರತಿಕ್ರಿಯಿಸಿದ ಶೇ.30ರಷ್ಟು ಮಂದಿ ತೃಪ್ತಿ ಹೊಂದಿದ್ದಾರೆ | • ಮಹದೇವಪುರ ವಲಯದ ವಾರ್ಡಿನಲ್ಲಿ ರಸ್ತೆಗಳ ಸ್ಥಿತಿ ಬಗ್ಗೆ ಪ್ರತಿಕ್ರಿಯಿಸಿದವರಲ್ಲಿ ಶೇ.64ರಷ್ಟು ಮಂದಿ ಅತೃಪ್ತರಾಗಿದ್ದಾರೆ.<br>• ರಾಜರಾಜೇಶ್ವರಿ ನಗರ ವಲಯದಲ್ಲಿ ರಸ್ತೆಗಳ ಸ್ಥಿತಿ ಬಗ್ಗೆ ಪ್ರತಿಕ್ರಿಯಿಸಿದ ಶೇ.55 ಮಂದಿ ಹೆಚ್ಚು ಅತೃಪ್ತರಾಗಿದ್ದಾರೆ. | • ರಾಜರಾಜೇಶ್ವರಿನಗರ ವಲಯದ 10 ವಾರ್ಡ್‌ಗಳ ಪೈಕಿ 9 ವಾರ್ಡ್‌ಗಳಲ್ಲಿ ಶೇ.50ಕ್ಕಿಂತ ಹೆಚ್ಚು ಜನರು ತಮ್ಮ ವಾರ್ಡ್‌ನ ರಸ್ತೆಯ ಸ್ಥಿತಿಯ ಬಗ್ಗೆ ಹೆಚ್ಚು ತೃಪ್ತರಾಗಿದ್ದರೆ<br>• ಮಹದೇವಪುರ ವಲಯದಲ್ಲಿ 17 ವಾರ್ಡ್‌ಗಳ ಪೈಕಿ 10ರಲ್ಲಿ ಶೇ.50ಕ್ಕಿಂತ ಹೆಚ್ಚು ಮಂದಿ ರಸ್ತೆ ಪರಿಸ್ಥಿತಿಯ ಬಗ್ಗೆ ಅತೃಪ್ತರಾಗಿದ್ದಾರೆ. |
| **ರಸ್ತೆದೀಪ ಮತ್ತು ಸುರಕ್ಷತೆ ಸ್ಥಿತಿ ಬಗ್ಗೆ** | • ಪ್ರತಿಕ್ರಿಯಿಸಿದ ಶೇ.31 ಮಂದಿ ತಮ್ಮ ವಾರ್ಡ್‌ನಲ್ಲಿನ ರಸ್ತೆ ಪರಿಸ್ಥಿತಿಗಳ ತೃಪ್ತಿಯ ಮಟ್ಟದಲ್ಲಿ ಅತೃಪ್ತರಾಗಿದ್ದಾರೆ<br>• ಶೇ. 39 ಮಂದಿ ತಮ್ಮ ವಾರ್ಡ್‌ನಲ್ಲಿನ ರಸ್ತೆ ಪರಿಸ್ಥಿತಿಗಳ ತೃಪ್ತಿಯ ಮಟ್ಟದಲ್ಲಿ ತಟಸ್ಥರಾಗಿದ್ದಾರೆ<br>• ಪ್ರತಿಕ್ರಿಯಿಸಿದ ಶೇ.30ರಷ್ಟು ಮಂದಿ ತೃಪ್ತಿ ಹೊಂದಿದ್ದಾರೆ | • ತಮ್ಮ ವಾರ್ಡ್‌ನ ರಸ್ತೆದೀಪ ಮತ್ತು ಸುರಕ್ಷತೆ ಪರಿಸ್ಥಿತಿಗಳ ಬಗ್ಗೆ ತೃಪ್ತಿಯ ಮಟ್ಟದಲ್ಲಿ, ರಾಜರಾಜೇಶ್ವರಿ ನಗರ ವಲಯದಲ್ಲಿ ಪ್ರತಿಕ್ರಿಯಿಸಿದ ಶೇ.60 (728ರಲ್ಲಿ 434) ಮಂದಿ ಹೆಚ್ಚು ತೃಪ್ತರಾಗಿದ್ದಾರೆ<br>• ಮಹದೇವಪುರ ವಾರ್ಡಿನಲ್ಲಿ ರಸ್ತೆದೀಪ ಮತ್ತು ಸುರಕ್ಷತೆ ಪರಿಸ್ಥಿತಿಗಳ ಬಗ್ಗೆ ಪ್ರತಿಕ್ರಿಯಿಸಿದ ಶೇ.46.51 (212/746) ಮಂದಿ ಅತೃಪ್ತರಾಗಿದ್ದಾರೆ. | • ಬೊಮ್ಮನಹಳ್ಳಿ ವಲಯದ 16 ವಾರ್ಡ್‌ಗಳ ಪೈಕಿ 11 ವಾರ್ಡ್‌ಗಳಲ್ಲಿ ಶೇ.50ಕ್ಕಿಂತ ಹೆಚ್ಚು ಜನರು ತಮ್ಮ ವಾರ್ಡ್‌ನ ಬೆಳಕು ಮತ್ತು ಇತರ ಸುರಕ್ಷತೆಯ ಬಗ್ಗೆ ಹೆಚ್ಚು ತೃಪ್ತಿ ಹೊಂದಿದ್ದಾರೆ,<br>• ಮಹದೇವಪುರ ವಲಯದ 17 ವಾರ್ಡುಗಳ ಪೈಕಿ 3ರಲ್ಲಿ ಶೇ.50ಕ್ಕಿಂತ ಹೆಚ್ಚು ಪ್ರತಿಕ್ರಿಯಿಸಿದವರು ಅವರ ವಾರ್ಡ್‌ನ ಬೆಳಕು ಮತ್ತು ಇತರ ಸುರಕ್ಷತಾ ಸ್ಥಿತಿ ಬಗ್ಗೆ ಹೆಚ್ಚು ಅತೃಪ್ತರಾಗಿದ್ದಾರೆ. |

| | | | |
|---|---|---|---|
| **ಕಸ ತೆಗೆಯುವಿಕೆ ಮತ್ತು ತ್ಯಾಜ್ಯ ನಿರ್ವಹಣೆ ಬಗ್ಗೆ** | • ಶೇ.31 ಮಂದಿ ತಮ್ಮ ವಾರ್ಡ್‌ನಲ್ಲಿ ಕಸ ತೆಗೆಯುವಿಕೆ ಮತ್ತು ತ್ಯಾಜ್ಯ ನಿರ್ವಹಣೆಯಲ್ಲಿ ಪಾಲಿಕೆ ಮಾಡಿದ ಕೆಲಸದ ತೃಪ್ತಿಯ ಮಟ್ಟದಲ್ಲಿ ಅತೃಪ್ತರಾಗಿದ್ದಾರೆ<br>• ಶೇ 39 ಮಂದಿ ವರು ತಮ್ಮ ವಾರ್ಡ್‌ನಲ್ಲಿ ಕಸ ತೆಗೆಯುವಿಕೆ ಮತ್ತು ತ್ಯಾಜ್ಯ ನಿರ್ವಹಣೆಯಲ್ಲಿ ಪಾಲಿಕೆ ಮಾಡಿದ ಕೆಲಸದ ತೃಪ್ತಿಯ ಮಟ್ಟದಲ್ಲಿ ತಟಸ್ಥರಾಗಿದ್ದಾರೆ<br>• ಪ್ರತಿಕ್ರಿಯಿಸಿದ ಶೇ.30 ರಷ್ಟು ಜನ ತೃಪ್ತಿ ಹೊಂದಿದ್ದಾರೆ | • ರಾಜರಾಜೇಶ್ವರಿ ನಗರ ವಲಯದಲ್ಲಿ ಪ್ರತಿಕ್ರಿಯಿಸಿದ ಶೇ.57 (414/728) ಮಂದಿ ಹೆಚ್ಚು ತೃಪ್ತಿ ಹೊಂದಿದ್ದಾರೆ<br>• ಪ್ರತಿಕ್ರಿಯಿಸಿದ ಶೇ.45 (81/181) ಯಲಹಂಕದವರು ಹೆಚ್ಚು ಅತೃಪ್ತರಾಗಿದ್ದಾರೆ. | • ಬೊಮ್ಮನಹಳ್ಳಿ ವಲಯದ 16 ವಾರ್ಡ್‌ಗಳ ಪೈಕಿ 13 ವಾರ್ಡ್‌ಗಳಲ್ಲಿ ಪ್ರತಿಕ್ರಿಯಿಸಿದ ಶೇ.50ಕ್ಕಿಂತ ಹೆಚ್ಚು ಮಂದಿ ಕಸ ತೆಗೆಯುವಿಕೆ ಮತ್ತು ತ್ಯಾಜ್ಯ ನಿರ್ವಹಣೆ ಸಂಬಂಧ ಪಾಲಿಕೆ ಮಾಡಿದ ಕೆಲಸದಿಂದ ಹೆಚ್ಚು ತೃಪ್ತರಾಗಿದ್ದರೆ,<br>• ರಾಜರಾಜೇಶ್ವರಿನಗರ ವಲಯದ 14 ವಾರ್ಡುಗಳ ಪೈಕಿ 2ರಲ್ಲಿ ಪ್ರತಿಕ್ರಿಯಿಸಿದ ಶೇ.50ಕ್ಕಿಂತ ಹೆಚ್ಚು ಮಂದಿ ಕಸ ತೆಗೆಯುವಿಕೆ ಮತ್ತು ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಪಾಲಿಕೆ ಮಾಡಿದ ಕೆಲಸದ ಬಗ್ಗೆ ಹೆಚ್ಚು ಅತೃಪ್ತಿ ವ್ಯಕ್ತಪಡಿಸಿದ್ದಾರೆ. |
| **ಉದ್ಯಾನವನಗಳು ಮತ್ತು ಆಟದ ಮೈದಾನಗಳ ಅಭಿವೃದ್ಧಿ** | • ಪ್ರತಿಕ್ರಿಯಿಸಿದವರಲ್ಲಿ ಶೇ 37% ಜನರು ತಮ್ಮ ವಾರ್ಡ್‌ನಲ್ಲಿರುವ ಉದ್ಯಾನವನಗಳು ಮತ್ತು ಆಟದ ಮೈದಾನಗಳ ಅಭಿವೃದ್ಧಿ ಮತ್ತು ನಿರ್ವಹಣೆಯಲ್ಲಿ ಪಾಲಿಕೆ ಮಾಡಿದ ಕೆಲಸದ ಬಗ್ಗೆ ತೃಪ್ತಿ ಹೊಂದಿದ್ದಾರೆ<br>• ಶೇ.40ರಷ್ಟು ಜನರು ತಮ್ಮ ವಾರ್ಡ್‌ನಲ್ಲಿರುವ ಉದ್ಯಾನವನಗಳು ಮತ್ತು ಆಟದ ಮೈದಾನಗಳ ಅಭಿವೃದ್ಧಿ ಮತ್ತು ನಿರ್ವಹಣೆಯಲ್ಲಿ ಪಾಲಿಕೆ ಮಾಡಿದ ಕೆಲಸದ ಬಗ್ಗೆ ತೃಪ್ತಿಯ ಮಟ್ಟದಲ್ಲಿ ತಟಸ್ಥರಾಗಿದ್ದಾರೆ<br>• ಶೇ.23ರಷ್ಟು ಮಂದಿ ಅತೃಪ್ತರಾಗಿದ್ದಾರೆ | • ರಾಜರಾಜೇಶ್ವರಿ ನಗರ ವಲಯದಲ್ಲಿ ಪ್ರತಿಕ್ರಿಯಿಸಿದ ಶೇ.62ರಷ್ಟು ಮಂದಿ (452/728) ಹೆಚ್ಚು ತೃಪ್ತಿ ಹೊಂದಿದ್ದಾರೆ<br>• ಪ್ರತಿಕ್ರಿಯಿಸಿದ ಮಹದೇವಪುರದ ಶೇ.56ರಷ್ಟು ಮಂದಿ (417/746) ಅತೃಪ್ತರಾಗಿದ್ದಾರೆ. | • ಬೊಮ್ಮನಹಳ್ಳಿ ವಲಯದ 16 ವಾರ್ಡ್‌ಗಳ ಪೈಕಿ 13 ವಾರ್ಡ್‌ಗಳಲ್ಲಿ ಶೇ. 50% ಕ್ಕಿಂತ ಹೆಚ್ಚು ಜನರು ಉದ್ಯಾನವನಗಳು ಮತ್ತು ಆಟದ ಮೈದಾನಗಳ ಅಭಿವೃದ್ಧಿ ಮತ್ತು ನಿರ್ವಹಣೆಯಲ್ಲಿ ಪಾಲಿಕೆ ಮಾಡಿದ ಕೆಲಸದಿಂದ ಹೆಚ್ಚು ತೃಪ್ತಿ ಹೊಂದಿದ್ದು<br>• ಮಹದೇವಪುರ ವಲಯದ 17 ವಾರ್ಡುಗಳ ಪೈಕಿ 3ರಲ್ಲಿ 50% ಕ್ಕಿಂತ ಹೆಚ್ಚು ಪ್ರತಿಕ್ರಿಯಿಸಿದ್ದು, ಉದ್ಯಾನವನಗಳು ಮತ್ತು ಆಟದ ಮೈದಾನಗಳ ಅಭಿವೃದ್ಧಿ ಮತ್ತು ನಿರ್ವಹಣೆಯಲ್ಲಿ ಪಾಲಿಕೆ ಮಾಡಿದ ಕೆಲಸಗಳ ಬಗ್ಗೆ ಹೆಚ್ಚು ಅತೃಪ್ತರಾಗಿದ್ದಾರೆ |
| **ಕೆರೆ ಅಭಿವೃದ್ಧಿ ಮತ್ತು ಪುನುರುಜ್ಜೀವ ಕೆಲಸದ ಬಗ್ಗೆ** | • ಬೆಂಗಳೂರಿನ ಶೇ.46ರಷ್ಟು ಮಂದಿ ತಮ್ಮ ವಾರ್ಡ್‌ನಲ್ಲಿ ಕೆರೆ ಅಭಿವೃದ್ಧಿ ಮತ್ತು ಪುನರುಜ್ಜೀವ | • ರಾಜರಾಜೇಶ್ವರಿನಗರ ವಲಯದ ಶೇ.57ರಷ್ಟು (414/728) ಮಂದಿ ಪ್ರತಿಕ್ರಿಯಿಸಿದ್ದು, | NA |

| | | | |
|---|---|---|---|
| | ಕೆಲಸದಿಂದ ತೃಪ್ತರಾಗಿದ್ದಾರೆ<br>• ಪ್ರತಿಕ್ರಿಯಿಸಿದವರಲ್ಲಿ ಶೇ.26ರಷ್ಟು ಮಂದಿ ತಟಸ್ಥರು<br>• ಶೇ.28ರಷ್ಟು ಮಂದಿ ಅತೃಪ್ತಿ ಹೊಂದಿದ್ದಾರೆ | ಹೆಚ್ಚು ತೃಪ್ತಿ ವ್ಯಕ್ತಪಡಿಸಿದ್ದಾರೆ<br>• ಮಹದೇವಪುರದ ಶೇ.47ರಷ್ಟು ಮಂದಿ (354/746) ಪ್ರತಿಕ್ರಿಯಿಸಿದ್ದು ಹೆಚ್ಚು ಅತೃಪ್ತಿ ವ್ಯಕ್ತಪಡಿಸಿದ್ದಾರೆ | |

## ವಿಭಾಗ 3: ಪಾಲಿಕೆ ಚುನಾವಣೆ

### 16. 2010ರ ಪಾಲಿಕೆ ಚುನಾವಣೆಯಲ್ಲಿ ಮತದಾನ

ಪ್ರತಿಕ್ರಿಯಿಸಿದ ಶೇ.88ರಷ್ಟು ಮಂದಿ ಬೆಂಗಳೂರು ನಗರವಾಸಿಗಳು ಕಳೆದ ಪಾಲಿಕೆ ಚುನಾವಣೆಯಲ್ಲಿ ತಮ್ಮ ಮತವನ್ನು ಚಲಾಯಿಸಿದ್ದಾರೆ

### 17.ಮತದಾನ ಮಾಡದಿರಲು ಕಾರಣ

ಪ್ರತಿಕ್ರಿಯಿಸಿದ ಶೇ.40ರಷ್ಟು ಮಂದಿ ಬೆಂಗಳೂರು ನಗರದ ನಾಗರಿಕರು ಕಳೆದ ಚುನಾವಣೆಯಲ್ಲಿ ಮತ ಚಲಾಯಿಸಲು ಮತದಾರರ ಗುರುತಿನ ಚೀಟಿಯನ್ನು ಹೊಂದಿರಲಿಲ್ಲ ಮತ್ತು ಇನ್ನೂ ಶೇ.40ರಷ್ಟು ಮಂದಿ ಚುನಾವಣೆಯ ಸಮಯದಲ್ಲಿ ಬೆಂಗಳೂರಿನಲ್ಲಿ ವಾಸ ಮಾಡುವವರು ಹೊರ ಊರುಗಳಿಗೆ ಹೋಗಿದ್ದರು ಎಂಬುದು ಕಳೆದ ಚುನಾವಣೆಯಲ್ಲಿ ಮತ ಚಲಾಯಿಸದಿರಲು ಪ್ರಮುಖ ಕಾರಣವಾಗಿದೆ.

ಪ್ರತಿಕ್ರಿಯಿಸಿದ ಶೇ. 93ರಷ್ಟು ಮಂದಿ ಮುಂದಿನ ಚುನಾವಣೆಯಲ್ಲಿ ಖಂಡಿತವಾಗಿಯೂ ಮತ ಚಲಾಯಿಸಲಿರುವುದಾಗಿ ತಿಳಿಸಿದರು.